**ಪ್ರಧಾನ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ.ಸಿ. ನಂಬರ : 2080/2025**

ಪಿರ್ಯಾದುದಾರರು : ಶ್ರೀ ಮಹಾಗಣಪತಿ ಮಹಾಸತಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ. ಸರ್ಪನಕಟ್ಟೆ, ಭಟ್ಕಳ

**ವಿರುದ್ಧ**

ಆರೋಪಿ : ಶ್ರೀ ಲೊಕೇಶ ತಂದೆ ಈರಪ್ಪ ನಾಯ್ಕ

ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಮೇರೆಗೆ ಆರೋಪಿಯ ಹೇಳಿಕೆ

ಪ್ರಶ್ನೆ 1 : ಈ ಪ್ರಕರಣದಲ್ಲಿನ ಪಿರ್ಯಾದಿದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರ : **Yes**

ಪ್ರಶ್ನೆ 2 ಫ್ರಾ.ಸಾ.1 ಶ್ರೀ ಕೃಷ್ಣ ತಂದೆ ಮಂಜುನಾಥ ನಾಯ್ಕ ಇವರು ತಮ್ಮ ಸಾಕ್ಷಿಯಲ್ಲಿ ಹೇಳಿರುವುದೆನೆಂದರೆ, ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯಿಂದ ದಿನಾಂಕಃ 13-10-2023 ರಂದು ರೂ.5,50,000/- ಸಾಲವನ್ನು ಪಡೆದುಕೊಂಡಿದ್ದು, ಮರುಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 3 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಸಾಲದ ಮರುಪಾವತಿಗಾಗಿ ಕೆನರಾ ಬ್ಯಾಂಕ, ಬೆಳ್ಕೆ ಶಾಖೆ ಇದರ ಚೆಕ್ ನಂಬರ್ 292107 ಮೊತ್ತ ರೂ.6,39,500/-ಕ್ಕೆ ದಿನಾಂಕಃ 15-05-2025 ನ್ನು ನಮೂದಿಸಿ ಚೆಕ್‌ನ್ನು ಪಿರ್ಯಾದಿ ಸೊಸೈಟಿಗೆ ನೀಡಿರುತ್ತೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 4 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದ್ರಿ ಚೆಕ್ಕನ್ನು ಫಿರ್ಯಾದಿ ಸಂಸ್ಥೆಯವರು ನಗಧೀಕರಣಕ್ಕಾಗಿ ಹಾಜರಪಡಿಸಿದಾಗ, "Funds Insufficient" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು, ದಿನಾಂಕಃ 17-05-2025 ರಂದು ವಾಪಾಸ್ಸು ಬಂದಿರುತ್ತದೆ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 5 ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚೆಕ್ ಅಮಾನ್ಯಗೊಂಡ ಕಾರಣದಿಂದ ದಿನಾಂಕಃ 27-05-2025 ರಂದು ಪಿರ್ಯಾದಿ ಸೊಸೈಟಿಯವರು ತಮ್ಮ ವಕೀಲರ ಮೂಲಕ ನಿಮಗೆ ನೋಟಿಸ್ ನೀಡಿದ್ದು, ಸದರಿ ನೋಟಿಸ್‌ನ್ನು ದಿನಾಂಕಃ 29-05-2025 ರಂದು ನೀವು ಸ್ವೀಕರಿಸಿರುತ್ತೀರಿ, ಆದರೂ ನೀವು ಸದ್ರಿ ನೋಟಿಸಿಗೆ ಉತ್ತರವನ್ನಾಗಲಿ ಅಥವಾ ಹಣವನ್ನು ಮರುಪಾವತಿಸಿದ್ದಾಗಲಿ ಇರುವುದಿಲ್ಲ, ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದಿದ್ದರೂ ಸಹ ಚೆಕ್‌ನ್ನು ನೀಡಿ ಅಪರಾಧವೆಸಗಿರುತ್ತೀರಿ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : **False**

ಪ್ರಶ್ನೆ 6 ನಿಮಗೆ ಹೇಳಲು ಇನ್ನೇನಾದರೂ ಇದೆಯಾ?

ಉತ್ತರ : **No**

ಪ್ರಶ್ನೆ 7 ನಿಮ್ಮ ಪರವಾಗಿ ಸಾಕ್ಷಿ ಇದೆಯಾ?

ಉತ್ತರ : **Yes**

(ಈ ಮೇಲಿನ ಆರೋಪಿಯ ಎಲ್ಲಾ ಹೇಳಿಕೆಗಳನ್ನು ನನ್ನ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿದ್ದು, ಆತ ಹೇಳಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿರುತ್ತದೆ.)

**Sd/-**

**(ಶ್ರೀಮತಿ.ದೀಪಾ ಅರಳಗುಂಡಿ)**

ಪ್ರಧಾನ ಸಿವಿಲ್ ಜಡ್ಜ ಮತ್ತು

ದಿನಾಂಕಃ 06/05/2026 ಪ್ರ. ದ. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.